ಶ್ರೀ ಆರ್. ಗುಂಡೂರಾವ್.—ಅನಾಯತಗಳು ನಡೆದಿವೆಯೆಂದು ನಿಲ್ಲಿಸಲಾಗಿತ್ತು. ಇದನ್ನೆಲ್ಲಾ ಸರಿ ಮಾಡೋಣ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ನಿವೇಶನಗಳಿಗೆ ೧೦ ಸಾರಿ ಅರ್ಜಿ ಹಾಕಿದರೂ ಸಿಗುವುದಿಲ್ಲ. ಆದರೆ ಹಿಂಬಾಗಿಲಿನಿಂದ ಹೋದರೆ ಸ್ಪೆಷಲ್ ಸೈಟುಗಳು ಸಿಗುತ್ತಿವೆ. ಆದ್ದರಿಂದ ಸೀನಿಯಾರಿಟಿ ಪ್ರಕಾರವೇ ಸ್ಪೆಷಲ್ ಸೈಟುಗಳನ್ನು ಮಂಜೂರು ಮಾಡುವ ಬಗ್ಗೆ ಏನಾದರೂ ಕಾನೂನು ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ನೋಡೋಣ, ವಿಚಾರ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ಪೆಷಲ್ ಸೈಟುಗಳು ಸಾಮಾನ್ಯವಾಗಿ ಒಳ್ಳೆಯ ಸೈಟುಗಳಾಗಿರುತ್ತವೆ. ಆದ್ದರಿಂದ ಬಹಿರಂಗವಾಗಿ ಆಕ್ಷನ್‌ನಲ್ಲಿ ಹೆಚ್ಚು ದುಡ್ಡು ಕೊಟ್ಟವರಿಗೆ ಈ ಸ್ಪೆಷಲ್ ಸೈಟುಗಳನ್ನು ಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್—ಇದು ಒಳ್ಳೆಯ ಸಲಹೆ. ಈಗಾಗಲೇ ಆ ಸಲಹೆ ಇದೆ. ಬಿ. ಡಿ. ಎ. ವಿಷಯ ಬಂದಾಗ ಅದನ್ನು ಹೇಳುತ್ತೇನೆ.

Conversion of Bangalore – Mangalore Road into National High Way.

SRI D. T. MAYANNA (Huliyurdurga) —Will the Minister for Public Works be pleased to state :—

(*a*) the number of years elapsed converting the Bangalore Mangalore Road as National High way No. 48 ;

(*b*) whether the grant received by the Central Government for this Road has been fully spent;

(*c*) whether Government has formulated a Scheme for developing this Road.

(*d*) the number of years within which this Scheme would be implemented ?

SRI KAGODU THIMMAPPA (Minister for Public Works).—

(*a*) About 9 years.

(*b*) Yes.

(*c*) The Central Government has inculded the developmental works of National High Way No. 48 in the Sixth Five Year Plan of 1978–83.

(*d*) The Scheme has to be implemented subject to availability of funds during Second or Third Plan Period.

ಶ್ರೀ ಡಿ. ಟಿ. ಮಾಯಣ್ಣ—ಸ್ವಾಮಿ, 'ಇ' ಪ್ರಶ್ನೆಗೆ ಉತ್ತರದಲ್ಲಿ ಳಲನೇ ನಂಬರ್ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕೆಲಸಗಳನ್ನು ಕೇಂದ್ರ ಸರ್ಕಾರದವರು ೧೯೭೮-೮೩ರ ಸನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದಾರೆ ಎಂದು ಹೇಳಿದ್ದೀರಿ. ಆದರೆ ನೆಲಮಂಗಲದ ಬಳಿ ಇರುವ ಕುಮುದವತಿ ನದಿ ಮತ್ತು ನಾಗಿನಿನದಿ ಸೇತುವೆ ಇದರಲ್ಲಿ ಸೇರಿದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ— ಸೇರಿದೆ.

ಶ್ರೀ ಡಿ. ಟಿ. ಮಾಯಣ್ಣ.—ಕೇಂದ್ರ ಸರ್ಕಾರದಿಂದ ಪ್ರತಿ ವರ್ಷವೂ ಬರುತ್ತಿರುವ ವಂತಿಕೆ ಹಣ ಪೂರ್ತಿಯಾಗಿ ಖರ್ಚಾಗಿದೆ ಎಂದು ಹೇಳಿದ್ದೀರಿ. ರಸ್ತೆ ಅಭಿವೃದ್ಧಿಗಾಗಿ ಎಷ್ಟು ಹಣ ಬಂದಿತ್ತು ಎಂಬುದನ್ನು ಹೇಳುತ್ತೀರಾ ಸ್ವಾಮಿ ?

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಈ ರಸ್ತೆ ಇರತಕ್ಕ ದೂರ ೩೨೦ ಕಿಲೋಮೀಟರ್. ಇದನ್ನು ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ರಸ್ತೆ ಅಭಿವೃದ್ಧಿಗೆ ಸುಮಾರು ೧೩೦ ಕೋಟಿ ರೂಪಾಯಿಗಳಿಗೆ ಒಪ್ಪಿಗೆ ಕೊಟ್ಟಿದ್ದಾರೆ. ಪಿ. ಡಿ. ವರ್ಕ್ಸ್‌ಗೆ ೧೪,೨೪,೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ. ಮೈನರ್ ಬ್ರಿಡ್ಜ್‌ಗಳಿಗೆ ೩೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಈ ರೀತಿ ೧೭.೨೪ ಲಕ್ಷ ರೂಪಾಯಿಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ. ಇದಲ್ಲದೆ ಸ್ಪೆಷಲ್ ರಿಪೇರಿಗಳಿಗೆ ಎಂದು ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕ ನಡೆದ ಸಂದರ್ಭದಲ್ಲಿ ನೆಲಮಂಗಲದಿಂದ ಹಿರೇಸಾವೆಯ ವರೆಗೆ ರಸ್ತೆ ರಿಪೇರಿಗೆ ೩೫,೮೪,೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೇಂದ್ರಸರ್ಕಾರದವರು ಕೊಟ್ಟಿರುವ ಒಟ್ಟು ಹಣವನ್ನು ಮೂರು ವರ್ಷಗಳಲ್ಲಿ ಖರ್ಚು ಮಾಡಬೇಕು. ಆದರಲ್ಲಿ ಮೊದಲನೇ ೧೭ ಲಕ್ಷ ರೂಪಾಯಿಗಳಲ್ಲಿ ಈವರೆಗೆ ಸುಮಾರು ೩೯ ಲಕ್ಷ ರೂಪಾಯಿಗಳು ಖರ್ಚಾಗಿದೆ. ಸ್ಪೆಷಲ್ ರಿಪೇರಿಗೆ ೩೫,೮೪,೦೦೦ ಕೊಟ್ಟಿದ್ದರೆ ಖರ್ಚು ಜಾಸ್ತಿಯಾಗಿ ೪೩ ಲಕ್ಷ ರೂಪಾಯಿ ಖರ್ಚಾಗಿದೆ. ವರ್ಷದಲ್ಲಿ ಎಷ್ಟು ಮಂಜೂರಾತಿ ಕೊಡುತ್ತಿದ್ದಾರೋ ಆ ಪ್ರಕಾರ ಆಯಾ ವರ್ಷದಲ್ಲಿ ಹಣ ಖರ್ಚು ಮಾಡಿದ್ದೇವೆ. ಹಣ ಲ್ಯಾಪ್ಸ್ ಮಾಡಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಈ ಹೆದ್ದಾರಿಯಲ್ಲಿ ಹಾಸನ-ಚನ್ನರಾಯಪಟ್ಟಣ ಮಧ್ಯೆ ೨೪ ಮೈಲಿ ಪ್ರದೇಶವನ್ನು ಅಭಿವೃದ್ಧಿ ಮಾಡುವುದಕ್ಕೆ ಕೇಂದ್ರಸರ್ಕಾರದಿಂದ ೧ ಕೋಟಿ ರೂಪಾಯಿಗಳ ಮಂಜೂರಾತಿಯಾಗಿದೆ ಎಂದು ಕೇಳಿದ್ದೇನೆ. ಇದು ನಿಜವೇ ? ಒಂದು ವೇಳೆ ಮಂಜೂರಾಗಿದ್ದರೆ ಕಾರ್ಯ ಯಾವಾಗ ಶುರುವಾಗುತ್ತದೆ ?

ಶ್ರೀ ಕಾಗೋಡು ತಿಮ್ಮಪ್ಪ.—ಹಾಸನ-ಚನ್ನರಾಯಪಟ್ಟಣ ಹೆದ್ದಾರಿಯ ಮಧ್ಯೆ ೨೪ ಮೈಲಿ ಪ್ರದೇಶವನ್ನು ಅಭಿವೃದ್ಧಿ ಮಾಡುವುದಕ್ಕೆ ಹಣ ಮಂಜೂರಾಗಿದೆ. ನವಂಗೆ ಒಟ್ಟು ಮಂಜೂರಾಗಿರುವ ಹಣದಲ್ಲಿ ಇದೂ ಸೇರಿದೆ. ಕೆಲವು ಕೆಲಸಗಳ ಬಗ್ಗೆ ಟೆಂಡರುಗಳನ್ನು ಕರೆದಿದ್ದೇವೆ. ಕೆಲಸವನ್ನು ಗುತ್ತಿಗೆದಾರರಿಗೆ ವಹಿಸತಕ್ಕ ಹಂತದಲ್ಲಿ ಕೆಲಸವಿವೆ. ಇನ್ನು ಕೆಲವಕ್ಕೆ ಟೆಂಡರುಗಳನ್ನು ಕರೆದಿಲ್ಲ, ಅದನ್ನು ಕರೆಯುತ್ತೇವೆ.

ಶ್ರೀ ಕೆ. ಪ್ರಭಾಕರ್.—ನೆಲಮಂಗಲದಿಂದ ಪಶ್ಚಿಮ ಭಾಗದ ಕಡೆ ಇರತಕ್ಕ ಕುಮದ್ವತಿ ನದಿ ಸೇತುವೆಯನ್ನು ಬಲಪಡಿಸುವ ಅಲೋಚನೆ ಇದೆಯೇ ಅಥವಾ ಅಲ್ಲಿಂದ ಡೀವಿಯೇಷನ್ ಮಾಡಿಕೊಂಡು ಹೊಸದಾಗಿ ಸೇತುವೆ ಕಟ್ಟುವ ಅಲೋಚನೆ ಇದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.— ಡೀವಿಯೇಷನ್ ಸೇರಿದೆ, ಮತ್ತೆ ಸೇತುವೆ ಬಲಪಡಿಸುವುದೂ ಸೇರಿದೆ.

ಶ್ರೀ ಡಿ. ಟಿ. ಮಾಯಣ್ಣ.— ಆ ಜಾಗದಲ್ಲಿ ಸೇತುವೆ ಆಗುತ್ತದೋ ಅಥವಾ ಹೊಸದಾಗಿ ಬೇರೆ ಕಡೆ ಆಗುತ್ತದೋ ?

ಶ್ರೀ ಕಾಗೋಡು ತಿಮ್ಮಪ್ಪ.— ನೆಲಮಂಗಲದ ಹತ್ತಿರ ಬೈ ಪಾಸ್ ಮಾಡುವುದು ಇದರಲ್ಲಿ ಸೇರಿದೆ.

ಶ್ರೀ ಡಿ. ಟಿ. ಮಾಯಣ್ಣ.— ನದಿಯ ಬಳಿ ಸೇತುವೆ ಕಟ್ಟುವಾಗ ರಸ್ತೆಯನ್ನು ಬೈ ಪಾಸ್ ಮಾಡುತ್ತಾರೆ. ಆದರೆ ಸೇತುವೆಯನ್ನು ಅದೇ ಜಾಗದಲ್ಲಿ ಕಟ್ಟುತ್ತೀರೋ ಅಥವಾ ಬೇರೆ ಜಾಗದಲ್ಲಿ ಕಟ್ಟುತ್ತೀರೋ ಎಂಬುದನ್ನು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎ. ಜಿ. ಕೊಡಗಿ.—೧೭ ಲಕ್ಷ ರೂಪಾಯಿ ಹಣ ಕೇಂದ್ರದಿಂದ ಮಂಜೂರಾಗಿದ್ದು ಅದರಲ್ಲಿ ೩೫ ಲಕ್ಷ ರೂಪಾಯಿ ಮಾತ್ರ ಖರ್ಚಾಗಿದೆ ಎಂದು ಹೇಳಿದ್ದೀರಿ. ೧೭ ಲಕ್ಷ ರೂಪಾಯಿ ಮೂರು ವರ್ಷದಲ್ಲಿ ಖರ್ಚಾಗಬೇಕೆಂದರೆ ೩೫ ಲಕ್ಷ ರೂಪಾಯಿ ಖರ್ಚು ಮಾಡಿರುವುದು ಕಡಿಮೆಯಾಗಿದೆ.

ಉಳಿದ ಹಣ ಖರ್ಚು ಮಾಡದೇ ಇರುವುದಕ್ಕೆ ಕಾರಣ ಏನು ? ಆದಕ್ಕೆ ಅವಕಾಶ ಇರಲಿಲ್ಲವೇ ? ಕೇಂದ್ರದಿಂದ ಹಣ ಮಂಜೂರಾಗಿದ್ದರೂ ಹಣ ಖರ್ಚು ಮಾಡದೇ ಇರುವುದಕ್ಕೆ ರಾಜ್ಯಸರ್ಕಾರಕ್ಕೆ ಇರುವ ಅಡ್ಡಿ ಆತಂಕಗಳೇನು ?

ಶ್ರೀ ಕಾಗೋಡು ತಿಮ್ಮಪ್ಪ.— ೧೯೮೦–೮೧ರಲ್ಲಿ ಪೂರ್ತಿ ಹಣ ಖರ್ಚು ಮಾಡಿದ್ದೇವೆ. ೧೯೮೧–೮೨ಕ್ಕೆ ಏನು ಮಂಜೂರಾತಿ ಸಿಕ್ಕಿದೆ ಅದನ್ನು ಖರ್ಚು ಮಾಡುತ್ತೇವೆ. ಈಗಾಗಲೇ ಕೆಲವು ಕೆಲಸಗಳ ಬಗ್ಗೆ ಟೆಂಡರ್ ಕರೆದಿದ್ದು ಕೆಲವಕ್ಕೆ ಕರೆದಿಲ್ಲ. ಅದನ್ನೂ ಕರೆಯುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

Estimated cost of Kallamballa Bridge

278 SRI S. S. Arakeri (Balloli).—Will the Minister for Public Works be pleased to state.—

(a) the total estimated cost of Kallahalla bridge Halasangi bridge Sirakanahalli bridge Pharasi Bridge at Baradal village in Balloli Constituency;

(b) whether these works are included in the budget for the year 1981–82.

(c) if so, when the words will be taken up.

(d) if not when these construction of bridges works will be included?

SRI KAGODU THIMMAPPA (Minister for Public Works.).—

(a) Total estimated cost is Rs. 70-00 Lakhs.

(b) No.

(c) The works will be taken up subject to availability of funds.

(d) Does not arise in view of reply to clause (c).

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಅಧ್ಯಕ್ಷರೇ, ಅಚ್ಚು ಹಾಕಿಸಿರುವ ಪ್ರಶ್ನೋತ್ತರ ಪಟ್ಟಿಯಲ್ಲಿ ನನ್ನ ಹೆಸರು ತಪ್ಪಾಗಿ ಮುದ್ರಿತವಾಗಿರುವುದಲ್ಲದೆ ನನ್ನ ಮತದಾರ ಕ್ಷೇತ್ರದಲ್ಲಿನ ಬರಡೋಲು ಗ್ರಾಮವನ್ನು ಬರಡಾಲ್ ಎಂದೂ ಸಿರಕನಹಳ್ಳಿಯನ್ನು ಸಿರಕಾನಹಳ್ಳಿ ಎಂದೂ ತಪ್ಪಾಗಿ ಮುದ್ರಿತವಾಗಿದೆ. ಆದುದರಿಂದ, ಇನ್ನು ಮುಂದೆ ಇಂತಹ ತಪ್ಪುಗಳು ಆಗದಂತೆ ಸರಿಯಾಗಿ ಅಚ್ಚಾಗಲು ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಆಗಲಿ.

ಶ್ರೀ ಎಸ್. ಎಸ್. ಅರಕೇರಿ.—ಬಳ್ಳೊಳ್ಳಿ ಚುನಾವಣಾ ಕ್ಷೇತ್ರದ ಕಲ್ಲಹಳ್ಳಿ, ಪಲಸಂಗಿ ಮತ್ತು ಸಿರಕನಹಳ್ಳಿಗಳಲ್ಲಿ ಸೇತುವೆಗಳ ನಿರ್ಮಾಣಕ್ಕೆ ಒಟ್ಟು ಅಂದಾಜು ಪೆಚ್ಚ ೭೦ ಲಕ್ಷ ರೂಪಾಯಿಗಳೆಂದು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿರುವರು. ಆದರೆ, ಪ್ರತಿಯೊಂದು ಸೇತುವೆಗೂ ಬಿಡಿಬಿಡಿಯಾಗಿ ಎಷ್ಟು ಅಂದಾಜು ಎಂಬುದನ್ನು ಅವರು ತಿಳಿಸುವರೆ?

ಶ್ರೀ ಕಾಗೋಡು ತಿಮ್ಮಪ್ಪ,—ಮಾನ್ಯ ಅಧ್ಯಕ್ಷರೇ, ಕಲ್ಲ ಹಳ್ಳಕ್ಕೆ high level Causeway ಕಟ್ಟಿದರೆ ೧೭ ಲಕ್ಷ ರೂಪಾಯಿಗಳಾಗುತ್ತದೆ, Low level causeway ಕಟ್ಟಿದರೆ ೫ ಲಕ್ಷ ರೂಪಾಯಿಗಳಾಗುತ್ತದೆ. ಪಲಸಂಗಿಯಲ್ಲಿ ಹಳ್ಳಕ್ಕೆ high level Causeway ಕಟ್ಟಿದರೆ ೧೯ ಲಕ್ಷ ರೂಪಾಯಿಗಳಾಗುತ್ತದ, low level Submersible causeway ಕಟ್ಟಿದರೆ ೧೦ ಲಕ್ಷ ರೂಪಾಯಿಗಳಾಗು